ಶ್ರೀ ಕೆ.ಎಸ್. ಈಶ್ವರಪ್ಪ:- ಭ್ರಷ್ಟಾಚಾರದಿಂದ ಗ್ರಾನೈಟ್ ಹಗರಣ ನಡೆಯುತ್ತಿದೆ ಇದನ್ನು ಮುಚ್ಚಿ ಹಾಕುವುದಕ್ಕೆ ಸರ್ಕಾರ ಏನು ಮಾಡುತ್ತಿದೆ ಇದರ ವಿರುದ್ಧವಾಗಿ ಎಲ್ಲಾ ವಿರೋಧ ಪಕ್ಷಗಳು ಸೇರಿ ನಾವೂ ಕೂಡ ಧರಣಿ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಬಿ.ಜೆ.ಪಿ., ಕಾಂಗ್ರೆಸ್ ಪಕ್ಷ ಮತ್ತು ಇನ್ನಿತರೆ ಸ್ವತಂತ್ರ ಪಕ್ಷಗಳ ಸದಸ್ಯರು ಸದನದ ಮುಂದಿನ ಬಾವಿಗೆ ಬಂದು ಧರಣಿ ಕುಳಿತರು)

SRI QUAMARUL ISLAM: Sir, yesterday when the hon. Member Sri Mallikarjuna Kharge raised this issue and requested that the Statement must be given by the Hon. Chief Minister in this behalf, the Hon. Chief Minister assured that a statement will be given by him immediately after the Question Hour. It was the duty of the Hon. Chief Minister to make statement in the matter accordingly when the situation is so serious. I request the Chair to call the Hon. Chief Minister to make a statement and till such time, on behalf of my Party, I also support and join the Members on the Opposition who are squatting in the well.

(At this stage, the hon. Member Sri Quamarul Islam joined the Hon. Members belonging to the BJP, Congress (I) who were squatting in the well of the House.)

ಶ್ರೀ ಆರ್.ಎಲ್. ಜಾಲಪ್ಪ:- ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು:- ಬೇರೆ ಬೇರೆ ಪಕ್ಷದವರು ಸಹ ಇನ್‌ಸ್ಟಾಲ್‌ಮೆಂಟಿನಲ್ಲಿ ಪೆಲ್‌ಗೆ ಬರುತ್ತಿದ್ದಾರೆ. ಎಲ್ಲಾ ಬಂದುಬಿಡಲಿ, ಆಮೇಲೆ ತಾವು ಮಾತನಾಡಿ.

ಶ್ರೀ. ಆರ್.ಎಲ್. ಜಾಲಪ್ಪ:- ಮಾನ್ಯ ಅಧ್ಯಕ್ಷರೆ, ಇವರು ದಿನವೂ ಬಾವಿಗೆ ಬೀಳೋದು ನೋಡಿ ನಮಗೆ ಸಾಕಾಗಿ ಹೋಗಿದೆ. ದಯವಿಟ್ಟು ಸಭೆಯನ್ನು ಐದು ನಿಮಿಷ ಅದ್ಜರ್ನ ಮಾಡಿ. ನಾವು ಮುಖ್ಯಮಂತ್ರಿಯವರಿಗೆ ಹೇಳಿ ಕಳುಹಿಸಿದ್ದೇವೆ. ಅವರು ಬೇಕಾಗಿಯೇ ಈ ಸಭೆಗೆ ಅಗೌರವ ತರಬೇಕು ಎಂದು ಸಮಯಕ್ಕೆ ಸರಿಯಾಗಿ ಬರಲಿಲ್ಲ ಎಂದು ಮಾನ್ಯ ಸದಸ್ಯರುಗಳು ಅಭಿಪ್ರಾಯ ತಳೆಯುವುದು ಬೇಡ. ತಾವು 5 ನಿಮಿಷ ಅದ್ಜರ್ನ ಮಾಡಿ

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಈ ಬಗ್ಗೆ ನಮ್ಮ ನೀತಿಯನ್ನು ಅವರು ಆತ್ಮಪೂರ್ವಕವಾಗಿ ಒಪ್ಪಿದ್ದಾರೆ. ದಯವಿಟ್ಟು ಮಾನ್ಯ ಬೈರೇಗೌಡರು ತಮ್ಮ ಆತ್ಮಸಾಕ್ಷಿಯನ್ನು ಪ್ರದರ್ಶನ ಮಾಡಿ ಈ ಧರಣಿಗೆ ನಮ್ಮ ಜೊತೆ ಬರಬೇಕು ಎಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮತ್ತು ಎಂ.ಸಿ. ನಾಣಯ್ಯನವರೂ ನಮಗೆ ಹಿಂದೆ ಸಮಿತಿಯಲ್ಲಿ ಬೆಂಬಲ ಕೊಟ್ಟಿದ್ದಾರೆ.

ಗ್ರಾನೈಟ್ ಸಮಿತಿಯನ್ನು ಮಾಡಿದಾಗ ಆ ಸಮಿತಿಯಲ್ಲಿ ಈಗ ಸಂಸದೀಯ ಸಚಿವರಾಗಿರತಕ್ಕಂಥ ಮಾನ್ಯ ನಾಣಯ್ಯನವರು ಸಹ ಬೆಂಬಲ ಕೊಟ್ಟಿದ್ದಾರೆ. ಅವರೂ ಸಹ ಬರಬೇಕು ಎಂದು ಕಳಕಳಿಯಿಂದ ಮನವಿ ಮಾಡಿ ಕೊಳ್ಳುತ್ತೇವೆ. ಹಾಗೂ ಮಾನ್ಯ ದೇಶಪಾಂಡೆಯವರೂ ಬೆಂಬಲ ಕೊಟ್ಟಿದ್ದಾರೆ, ಅವರೂ ಬರಬೇಕು.

ಶ್ರೀ ಆರ್. ಎಲ್. ಜಾಲಪ್ಪ: ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನ ಅಧ್ಯಕ್ಷರ ಕೊಠಡಿಯೊಳಗೆ ಇದ್ದಾರೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನೀವು ಉತ್ತರ ಕೊಡುವವರೆಗೂ ಧರಣಿ ನಿಲ್ಲುವುದಿಲ್ಲ ಎನ್ನುವುದನ್ನು ಸ್ಪಷ್ಟ ಪಡಿಸುತ್ತಿದ್ದೇನೆ.

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ನಮಗೆ ವಚನವನ್ನು ನೀಡಿದ್ದಾರೆ. ಇವತ್ತು ಬಂದು ಈ ವಿಷಯದ ಬಗ್ಗೆ ಹೇಳಿಕೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಇವತ್ತು ಅವರು ಹೇಳಿಕೆ ಕೊಡುವ ಸೂಚನೆ ಇನ್ನು ಕಂಡುಬಂದಿಲ್ಲ. ನಾವು ಈಗ ಧರಣಿಗೆ ಬೆಂಬಲ ಕೊಡದಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸದನದ ನಾಯಕರಾಗಿರತಕ್ಕಂಥ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾದುದು ಅವರ ಕರ್ತವ್ಯ ಎಂದು ಹೇಳಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ:- ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನ ಅಧ್ಯಕ್ಷರ ಕೊಠಡಿಯಲ್ಲಿ ಇವತ್ತು ಚರ್ಚೆ ನಡೆಸುತ್ತಿದ್ದಾರೆ. ಅವರು ಅಲ್ಲಿ ಇದ್ದಾರೆ. ಅವರು ಅಲ್ಲಿಂದ ಬಂದ ತಕ್ಷಣ ಇಲ್ಲಿ ಹೇಳಿಕೆ ಕೊಡುತ್ತಾರೆ. ಅವರು ಸದನಕ್ಕೆ ಅಗೌರವ ಕೊಡಬೇಕು ಎನ್ನುವ ಉದ್ದೇಶದಿಂದ ಮಾಡುತ್ತಾ ಇಲ್ಲ. ವಿಧಾನ ಪರಿಷತ್ತಿನ ಅಧ್ಯಕ್ಷರು ಹೇಳಿಕಳುಹಿಸಿದಾಗ ಹೋಗದೆ ಇದ್ದರೆ ಅದು ಸೌಜನ್ಯ ಅಲ್ಲ, ಅಲ್ಲಿ ಹೋಗಿದ್ದಾರೆ. ಅದನ್ನು ದಯವಿಟ್ಟು ಮಾನ್ಯ ಸದಸ್ಯರುಗಳು ತಪ್ಪು ಕಲ್ಪಿಸಿಕೊಳ್ಳುವುದು ಬೇಡ. ಬೇಕಾದರೆ ಅಲ್ಲಿವರೆವಿಗೂ ಬೇರೆ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಐದು ನಿಮಿಷ ಅಡ್ಜರ್ನ್ ಮಾಡಿ. ಅವರು ಅಲ್ಲಿಂದ ಬಂದ ತಕ್ಷಣ ಸ್ಟೇಟಮೆಂಟ್ ಮಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವರು ಇಲ್ಲಿಗೆ ಬಂದು ಉತ್ತರ ಕೊಡುವವರೆಗೂ ನಮ್ಮ ಎರಡು ವಿಷಯಗಳು ಫುಲ್‌ಫಿಲ್ ಆಗುವವರೆಗೂ ನಮ್ಮ ಧರಣಿ ನಿಲ್ಲುವುದಿಲ್ಲ. ಮೊದಲನೆಯದು ಸಚಿವರನ್ನು, ಕೈಬಿಡಬೇಕು. ಎರಡನೆಯದು ಸದನದ ಸಮಿತಿಯನ್ನು ಮಾಡಬೇಕು. ಇಲ್ಲದಿದ್ದರೆ ಸಿಬಿಐಗೆ ವಹಿಸಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗಾರಾಜ್:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸಿಬಿಐ ತನಿಖೆಯಾಗಲಿ. ಅದೆಲ್ಲಾ ಮಾತುಕತೆ ನಡೆಯಲಿ. 20 ನಿಮಿಷ ಸದನವನ್ನು ಮುಂದೂಡಿ. ಮಾನ್ಯ ಮುಖ್ಯಮಂತ್ರಿಗಳು

ಉತ್ತರ ಕೊಡುವುದಕ್ಕೆ ತಯಾರು ಆಗಿದ್ದೇವೆ ಎಂದು ಹೇಳುವವರೆಗೆ ನಾವು ಒಳಗಡೆ ಬರುವ ಪ್ರಶ್ನೆ ಇಲ್ಲ. ದಯವಿಟ್ಟು ತಾವು ಸದನವನ್ನು ಮುಂದೂಡಿದರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಗ್ರಾನೈಟ್ ಕಲ್ಲಿನ ವಿಚಾರದಲ್ಲಿ 20 ಜನರ ಹೆಸರು ಕೇಳಿಬರುತ್ತಿದೆ ಎಂದು ಜನ ಮಾತನಾಡುತ್ತಿದ್ದಾರೆ. ಇವತ್ತು ಕೆಲವರ ಮೇಲೆ ವಿನಃಕಾರಣ ಅಪಾದನೆ ಬರಬಹುದು. ಅದನ್ನು ತೊಳೆದುಕೊಳ್ಳುವಂತಹ ದೃಷ್ಟಿಯಿಂದ ಹೇಳಿಕೆ ಕೊಡುವಂಥಾದ್ದು ಅಗತ್ಯ ಇದೆ. ಆ ಪಟ್ಟಿ ಏನಿದೆ ಅದು ಬರಬೇಕು ಸ್ವಾಮಿ. ಆ ಪಟ್ಟಿಯನ್ನು ಅನೌನ್ಸ ಮಾಡಬೇಕಾಗುತ್ತದೆ. ಅಲ್ಲಿ ಏನು ಒಂದು ಕಳ್ಳಸಾಗಾಣಿಕೆ ಆಗುತ್ತಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನೀವು ಹೇಳುವುದು ಹೇಳುತ್ತೀರಿ ಬೇರೆಯವರದು ಕೇಳುತ್ತಾ ಇಲ್ಲವಲ್ಲ. ನಾವು ನಿನ್ನೆ ಶಾಂತರೀತಿಯಿಂದ ಇಲ್ಲಿ ಕುಳಿತುಕೊಂಡು ಕೇಳಿದ್ದೇವೆ. ನಾಳೆ ಪ್ರಶ್ನೋತ್ತರ ಆದಮೇಲೆ ಉತ್ತರ ಹೇಳುತ್ತೇವೆ ಎಂದರು... ಇದರಲ್ಲಿ ಎಕ್ಸಪೋರ್ಟ್ಸ್‌ಗೆ ಇನವಾಲ್ವ್ ಆಗಿದ್ದಾರೆ. ಎಕ್ಸ್‌ಪೋರ್ಟ್ ಎಂದರೆ ಅದು ಸಿಓಡಿ ಎನ್‌ಕ್ವೈರಿಯಿಂದ ಆಗುವುದಿಲ್ಲ. ಏಕೆಂದರೆ ಅದಕ್ಕೆ ಸಿಬಿಐ ಎನಕ್ವೆಯರಿ ಮಾಡಿದರೆ ಅದು ಸರಿಹೋಗುತ್ತದೆ. ಇಲ್ಲಾ ಎಂದರೆ ಸರಿಹೋಗುವುದಿಲ್ಲ. ಸಿಓಡಿ ಅಥವಾ ಜಾಯಿಂಟ್ ಕಮಿಟಿ ಮಾಡಿದರೆ ಅದು ಮತ್ತೆ ಹತ್ತಾರು ತಿಂಗಳು ಮುಂದೆ ಹೋಗುತ್ತದೆ. ದಯವಿಟ್ಟು ಇದನ್ನು ಮದ್ರಾಸ್ ರಾಜ್ಯದ ಬಂದರುವಿನಲ್ಲಿ ಎಕ್ಸ್‌ಪೋರ್ಟ್ ಮಾಡುತ್ತಾರೆ, ಮಂಗಳೂರು ಬಂದರಿನಲ್ಲಿ ಎಕ್ಸ್‌ಪೋರ್ಟ್ ಮಾಡುತ್ತಾರೆ, ಕಾರವಾರದಲ್ಲಿ ಮಾಡುತ್ತಾರೆ. ಬಾಂಬೆಯಲ್ಲಿ ಮಾಡುತ್ತಾರೆ. ಅದಕ್ಕಾಗಿ ಅನೇಕ ರಾಜ್ಯಗಳು ಇದರಲ್ಲಿ ಇನವಾಲ್ವ್ ಆಗಿರುವ ಕಾರಣ ಇದರ ಬಗ್ಗೆ ತನಿಖೆಯಾಗಬೇಕಾದರೆ ಸಿಬಿಐ ತನಿಖೆಯೇ ಆಗಬೇಕು ಅದಕ್ಕಾಗಿ ದಯವಿಟ್ಟು ಅವರು ಬರಲಿ, ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಡಲಿ. ನಾವು ರೆಡಿ ಇದ್ದೇವೆ. ನೀವು ಆ ಕಾಲ ಈ ಕಾಲ ಎಂದು ಹೇಳಿಕೊಂಡೇ ಹೋಗಿ. ಆ 21 ಜನರ ಹೆಸರನ್ನು ಕೊಡಿ. ನೀವು ಹೇಳಿದ್ದೀರಿ ಅದನ್ನು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಸಾವಿರಾರು ಕೋಟಿ ರೂಪಾಯಿ ಲೂಟಿಯಾಗಿದೆ. ಮತ್ತು ಸಂಪತ್ತು ನಷ್ಟವಾಗುತ್ತಿದೆ. ಇದು ಸಂಪೂರ್ಣವಾಗಿ ನಿಲ್ಲಬೇಕು. ಈ ಗ್ರಾನೈಟ್‌ನ್ನು ತೆಗೆಯುವ ನೀತಿ ನಿಲ್ಲಬೇಕು. ಗ್ರಾನೈಟ್‌ನ್ನು ತೆಗೆಯಕೂಡದು. ಇಡೀ ರಾಜ್ಯದ್ಯಂತ ಗ್ರಾನೈಟ್‌ನ್ನು ಸಂಪೂರ್ಣವಾಗಿ ನಾಶವಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, 443 ಮತ್ತು 444 ಎಂದು ಎರಡು ರೀತಿಯ ರಸೀತಿ ಪುಸ್ತಕಗಳನ್ನು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರಿಂಟ್ ಮಾಡಿ ಡುಪ್ಲಿಕೇಟ್ ಪರ್ಮಿಟ್ ಇಷ್ಯೂ ಮಾಡಿ ಲೂಟಿ ಮಾಡಿರುವಂತಹ ಸಂಗತಿ ತಿಳಿದು ಬಂದಿದೆ. ಈ ನಂಬರ್ 443 ಮತ್ತು 444....

ಶ್ರೀ ಆರ್.ಎಲ್.ಜಾಲಪ್ಪ:- ಅದೆಲ್ಲಾ ಆಗಿದೆಯಲ್ಲ ಸ್ವಾಮಿ. ಪತ್ರಿಕೆಯಲ್ಲೆಲ್ಲಾ ಬಂದಿದೆ...

(ಗೊಂದಲ)

ಶ್ರೀ ಸಿ. ಬೈರೇಗೌಡ:- ಒಂದೇ ಕಡೆ ಪ್ರಚಾರದ ದೃಷ್ಟಿಯಿಂದ ಹೇಳತಕ್ಕಂಥಾದ್ದು ಸರಿಯಲ್ಲ. ಅದನ್ನು ಕಂಡು ಹಿಡಿದಿರತಕ್ಕಂಥಾದ್ದು, ಅದರ ಮೇಲೆ ಕ್ರಮ ತೆಗೆದುಕೊಂಡಿರತಕ್ಕಂಥಾದ್ದು, ಸಂಬಂಧಪಟ್ಟಿರತಕ್ಕಂಥ ಅಧಿಕಾರಿ ಯಾರಿದ್ದಾರೆ ಅವನ ಮೇಲೆ ಅಮಾನತ್ತಿನಲ್ಲಿಟ್ಟಿರತಕ್ಕಂಥಾದ್ದು, ಅವನ ಮೇಲೆ ಕ್ರಿಮಿನಲ್ ಕೇಸನ್ನು ಹಾಕಿರತಕ್ಕಂಥಾದ್ದು ಎಲ್ಲಾ ಸಹ ಗೊತ್ತಿರತಕ್ಕಂಥಾದ್ದು. ಅದನ್ನೇ ಹೇಳುವ ಅಗತ್ಯ ಇಲ್ಲ. ಆ ಕ್ರಮ ತೆಗೆದುಕೊಂಡಿರತಕ್ಕಂಥಾದ್ದು ಸರ್ಕಾರ, ಯಾರು ತೆಗೆದುಕೊಂಡಿದ್ದಾರೆ?

(ಗೊಂದಲ)

ಶ್ರೀ ಸಿ. ಬೈರೇಗೌಡ:- ಅದನ್ನು ಮುಚ್ಚಿಹಾಕತಕ್ಕಂಥ ಅವಶ್ಯಕತೆ ಯಾರಿಗೂ ಇಲ್ಲ, ಮುಚ್ಚತಕ್ಕಂಥ ಪ್ರಯತ್ನವು ಸಹ ನಡೆದಿಲ್ಲ. ಇದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ಯಾರಾದರೂ ಇರಬಹುದು, ಯಾರು ಇದಕ್ಕೆ ಸಂಬಂಧಪಟ್ಟಿರುತ್ತಾರೋ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಅದಕ್ಕೆ ನಾವು ಹಿಂದೆ ಹೋಗುವಂತಹ ಪ್ರಶ್ನೆ ಇಲ್ಲ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದ ಹಾಗೆ ಇದೇ ವಿಚಾರದ ಬಗ್ಗೆ ಆ ಸದನದಲ್ಲಿ ಪ್ರಸ್ತಾಪ ಆಗಿ ಮಾನ್ಯ ಸದಸ್ಯರುಗಳು ಸಹ ಇದೇ ರೀತಿ ಧರಣಿ ಮಾಡುತ್ತಿದ್ದಾರೆ. ಆ ವಿಚಾರದಲ್ಲಿ ಇವತ್ತು ಅಲ್ಲಿ ಅಧಿಕಾರಿಗಳನ್ನು ಸಭೆಗೆ ಕರೆದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಇವತ್ತು ವಿಧಾನ ಪರಿಷತ್ತಿನಲ್ಲಿ ಮಾನ್ಯ ಸಭಾಪತಿಯವರ ಜೊತೆ ಮಾತುಕತೆಯಲ್ಲಿ ತೊಡಗಿದ್ದಾರೆ. ಅಲ್ಲಿ ಮಾತುಕತೆ ಮುಗಿದ ತಕ್ಷಣ ಈ ಸದನಕ್ಕೆ ಬರುತ್ತಾರೆ. ಅದರ ಬಗ್ಗೆ ಹೇಳಿಕೆಯನ್ನು ಮಾಡುವವರಿದ್ದಾರೆ. ಹೇಳಿಕೆಯಾದ ಮೇಲೆ ತೃಪ್ತಿ ಆಗುವುದು, ತೃಪ್ತಿ ಆಗದೇ ಇರುವಂತಾದ್ದು ಮಾನ್ಯ ಸದಸ್ಯರಿಗೆ ಬಿಟ್ಟಿರತಕ್ಕಂಥ ವಿಚಾರ. ಅವರು ಹೇಗೆ ನಡೆದುಕೊಳ್ಳಬೇಕು ಎಂದು ಹೇಳತಕ್ಕಂಥ ಅಧಿಕಾರ ನನಗೆ ಇಲ್ಲ. ಅದು ಯಾವ ಸರ್ಕಾರಕ್ಕೂ ಕೂಡ ಇಲ್ಲ. ಆದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ ಇವತ್ತು ಸನ್ಮಾನ್ಯ ಸಭಾಪತಿಯವರ ಹತ್ತಿರ ಸಭೆ ನಡೆಯುತ್ತಿದೆ. ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಇದೇ ರೀತಿ ನಡೆಯಬೇಕು, ಹೀಗೆ ನಡೆಯಬೇಕು ಎಂದು ನಿರ್ದೇಶನ ಮಾಡುವುದಕ್ಕೆ ಆಗುವುದಿಲ್ಲ ಸ್ವಾಮಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಯಾವ ಆಪಾದನೆಗೆ ಮೇಲ್ನೋಟಕ್ಕೆ ಗುರಿಯಾಗಿದ್ದಾರೆ ಆ ಸಚಿವರನ್ನು ಕೈಬಿಟ್ಟು, ಎರಡು ಸದನದ ಸಮಿತಿಯನ್ನು ರಚನೆ ಮಾಡಿ ತನಿಖೆಗೆ ಆದೇಶ ಕೊಡಿ ಎಂದು ಹೇಳಿದರೆ ಏಕೆ ಮೀನಮೇಷ ಎಣಿಸುತ್ತಿದ್ದೀರಿ? ಒಂದು ಕ್ಷಣದಲ್ಲಿ ಆ ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ಏಕೆ ಹಿಂದೆಮುಂದೆ ನೋಡುತ್ತಿದ್ದೀರಿ? ಏಕೆ ನಿಧಾನ ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ಸಿ. ಬೈರೇಗೌಡ:- ಅವರು ಉತ್ತರ ಕೊಡುತ್ತಾರೆ...

ಶ್ರೀ ವಾಟಾಳ್ ನಾಗರಾಜ್:- ನಕಲಿ ಸರ್ಟಿಫಿಕೇಟಿನಲ್ಲಿ ಯಾರ್ಯಾರು ಇದ್ದಾರೆ. ಅದರ ಬಗ್ಗೆ ಸಹ ತನಿಖೆಯಾಗಬೇಕು.

ಅಧ್ಯಕ್ಷರು:- ಸನ್ಮಾನ್ಯ ಎಲ್ಲಾ ಸದಸ್ಯರುಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನೀವು ಒಬ್ಬರಾದ ಮೇಲೆ ಒಬ್ಬರು ನಾನು ಮಾತನಾಡುವುದಕ್ಕೆ ಅವಕಾಶ ಕೊಡದೇ ಇದ್ದಾಗ ಹೀಗೆ ಮಾತನಾಡಿದವರಿಗೆ ಏನು ಹೇಳುವುದಕ್ಕಾಗುತ್ತದೆ? ಎಷ್ಟೊತ್ತು ನಾನು ತಾಳ್ಮೆಯಿಂದ ಕಾಯಲಿ. ನಾನು ತಮಗೆ ಇಷ್ಟೆ ಹೇಳುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಇಲ್ಲಿ ಇದ್ದಿದ್ದು ಹೌದು. ಇವತ್ತು ಪ್ರಶ್ನೋತ್ತರದ ನಂತರ ಇದಕ್ಕೆ ಸಮರ್ಪಕವಾದಂತಹ ಉತ್ತರವನ್ನು ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದು ಹೌದು. ಇವತ್ತು ಪ್ರಶ್ನೋತ್ತರ ಮುಗಿಯುವ ವೇಳೆಗೆ ಇದೇ ವಿಷಯವನ್ನು ಪ್ರಸ್ತಾಪಕ್ಕೆ ತೆಗೆದುಕೊಂಡು ಮೇಲ್ಮನೆಯಲ್ಲಿ ಅವರು ಸಭಾಪತಿಯವರ ಜೊತೆ ಚರ್ಚೆಯಲ್ಲಿ ಇರುವುದರಿಂದ ಆ ಸದನ ಹೀಗೆ ನಡೆಯಬೇಕು ಎನ್ನುವ ನಿರ್ದೇಶನ ಮಾಡತಕ್ಕಂಥ ಅಧಿಕಾರ ವ್ಯಾಪ್ತಿ ನಮಗೆ ಇಲ್ಲ. ಅದುದರಿಂದ ತಮ್ಮಲ್ಲಿ ಇಷ್ಟು ವಿನಂತಿ ಮಾಡಿಕೊಳ್ಳುತ್ತೇನೆ. ತಾವೆಲ್ಲಾ ವಿರೋಧ-ಪಕ್ಷದ ಮುಖಂಡರುಗಳು ಒಂದು ವೇಳೆ ದೊಡ್ಡ ಮನಸ್ಸು ಮಾಡುವುದಾದರೆ ಅವರು ಬರುವವರೆಗೆ, ಎಂದರೆ ಆ ಸದನದಿಂದ ಚರ್ಚೆ ಮುಗಿಸಿ ಇಲ್ಲಿಗೆ ಬರುವವರೆಗೆ ಸಾರ್ವಜನಿಕ ಮಹತ್ವದ ಬೇರೆ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ ಎಂದರೆ ತೆಗೆದುಕೊಳ್ಳೋಣ. ಇಲ್ಲದೇ ಹೋದರೆ ನಾನು ಪ್ರತಿಷ್ಠೆ ಮೇಲೆ ಕುಳಿತುಕೊಳ್ಳುವುದಿಲ್ಲ. ಅದನ್ನು ಹೇಳುವುದಕ್ಕೆ ನೀವು ಅವಕಾಶ ಮಾಡಿಕೊಡದೆ ಈ ರೀತಿ ನಿಂತುಕೊಂಡರೆ ನಾವು ಏನು ಮಾಡಬೇಕು? ಈಗ ಸಭೆಯನ್ನು ಮುಂದೂಡಿ, 15 ನಿಮಿಷದ ನಂತರ ಮತ್ತೆ ಸೇರೋಣ.

(ಸದನವು 11.52 ಗಂಟೆಗೆ ಮುಕ್ತಾಯಗೊಂಡು ಪುನಃ 15 ನಿಮಿಷಗಳ ನಂತರ ಸೇರಲು [illegible]ತು)

(ಸದನವು 12.40 ನಿಮಿಷಕ್ಕೆ ಮತ್ತೆ ಪುನರ್ ಸಮಾವೇಶಗೊಂಡಿತು) (ಈ ಹಂತದಲ್ಲಿ ಬಿ.ಜೆ.ಪಿ ಸದಸ್ಯರು ಮತ್ತು ಕಾಂಗ್ರೆಸ್ (ಐ) ಸದಸ್ಯರ ಮುಖಂಡರನ್ನೊಳಗೊಂಡಂತೆ ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು.)

(ಸದಸ್ಯರು ತಮ್ಮ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:- ನೋಡಿ ನೀವು ವಾಟಾಳರನ್ನು ಇಲ್ಲಿ ಬಿಟ್ಟು ನೀವು ಅಲ್ಲಿ ಇರುವುದು ಒಳ್ಳೆಯದಲ್ಲಾ ಸ್ನೇಹದಲ್ಲಿ.

ಶ್ರೀ ವಾಟಾಳ್ ನಾಗರಾಜ್:- (ಬಾವಿಯೊಳಗಿಂದ ಮಾತನಾಡಿದ್ದು) ಹೊರಗಡೆಯಿಂದ ನಾನು ಬಹಳ ಪ್ರಯತ್ನ ಪಟ್ಟಿದ್ದೇನೆ, ನೋಡೋಣ ಏನಾದರೂ ಅನುಕೂಲ ಆಗಬಹುದು.

ಅಧ್ಯಕ್ಷರು:- ಇವೊತ್ತಂತೂ ವಾಟಾಳರು ಯಶಸ್ವಿಯಾದ ಹಾಗೆ, ಅವರನ್ನು ನಾನು ಅಭಿನಂದಿಸಬೇಕು. ಇದು ಅವರ ಬಹಳ ದಿನದ ಬಯಕೆ, ಎಲ್ಲರನ್ನು ಒಟ್ಟು ಮಾಡಬೇಕು ಎನ್ನತಕ್ಕಂಥದ್ದು. ಅವರು ಇಷ್ಟು ಮಾಡಿದಮೇಲೆ ಉಳಿದ್ದನ್ನು ಅವರು ಸಭಾನಾಯಕರು ಬರುತ್ತಾ ಇದ್ದಾರೆ.